# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂಅಪ್ರಾ/ನಯೋಸ/ CLU-01/ 519 /2015-16. ದಿನಾಂಕ : 19-05-15
No. Date :

## ಪ್ರಾರಂಭಿಕ ಪ್ರಮಾಣ ಪತ್ರ

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕಸವನಳ್ಳಿ ಗ್ರಾಮದ ಸರ್ವೆ ನಂ. 6/7 ರ ಪೈಕಿ 0.05.74 ಗುಂಟೆ ಅಥವಾ 580.72 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಡಿ ಭೂ-ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ರಾಮಲಿಂಗಾರೆಡ್ಡಿ, ಶ್ರೀಮತಿ ಚಾಮುಂಡೇಶ್ವರಿ ಮತ್ತು ಶ್ರೀ ಬಿ. ಗೋಪಾಲ ರೆಡ್ಡಿ ಪಾಲುದಾರರು ರವರುಗಳ ಪರವಾಗಿ ಮೆ ಎಸ್.ಎಸ್. ಡೆವಲಪರ್ಸ್ ರವರು ಕೋರಿರುವ ಬಗ್ಗೆ.

ಉಲ್ಲೇಖ:
1. ದಿನಾಂಕ 06.04.2015 ರ ಅರ್ಜಿದಾರರ ಮನವಿ.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Sub section [3] ರಂತೆ ಕ್ರಮ ವಹಿಸಿರುವುದು.
3. ಮಾನ್ಯ ಆಯುಕ್ತರವರ ಆದೇಶದ ದಿನಾಂಕ 12.05.2015.
4. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/CLU-01/425/2015-16, ದಿನಾಂಕ 12.05.2015 ರಲ್ಲಿ ಭೂ ಉಪಯೋಗ ಬದಲಾವಣೆ ಸಂಬಂದ ಅರ್ಜಿದಾರರಿಗೆ ₹. 26,300/- ಗಳನ್ನು ಪಾವತಿಸಲು ತಿಳಿಸಿರುವುದು.
5. ಅರ್ಜಿದಾರರು ದಿನಾಂಕ 13.05.2015 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. 1291 ರ ಮೂಲಕ ₹. 26,300/- ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 16.05.2015 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕಸವನಳ್ಳಿ ಗ್ರಾಮದ ಸರ್ವೆ ನಂ. 6/7 ರ ಪೈಕಿ 0.05.74 ಗುಂಟೆ ಅಥವಾ 580.72 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆಯನ್ನು ಉಲ್ಲೇಖ [1] ರ ಅರ್ಜಿಯಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ ಉಲ್ಲೇಖ [2] ರಲ್ಲಿ ಅವಕಾಶ ಕಲ್ಪಿಸಿರುವಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14[ಎ] Subsection [3] ರ [Deemed Permission] ಅಡಿಯಲ್ಲಿ ಸದರಿ ಜಮೀನನ್ನು ಕೈಗಾರಿಕಾ [ಹೈಟೆಕ್] ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಮಾನ್ಯ ಆಯುಕ್ತರು ಉಲ್ಲೇಖ [3] ರಲ್ಲಿ ಅನುಮೋದನೆ ನೀಡಿರುತ್ತಾರೆ. ಅದರಂತೆ ಸದರಿ ಜಮೀನಿನ ಭೂ ಉಪಯೋಗ ಬದಲಾವಣೆ ಕುರಿತಂತೆ ಒಟ್ಟು ಮೊತ್ತ ₹. 26,300/- [₹. ಇಪ್ಪತ್ತಾರು ಸಾವಿರದ ಮೂನ್ನೂರು ಮಾತ್ರ] ಗಳನ್ನು ಸಂದಾಯ ಮಾಡುವಂತೆ ಉಲ್ಲೇಖ [4] ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ₹. 26,300/- [₹. ಇಪ್ಪತ್ತಾರು ಸಾವಿರದ ಮೂನ್ನೂರು ಮಾತ್ರ] ಗಳನ್ನು ಚಲನ್ ಸಂಖ್ಯೆ 1291 ರಲ್ಲಿ ದಿನಾಂಕ 13.05.2015 ರಂದು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಸದರಿ ಶುಲ್ಕಗಳು ಪ್ರಾಧಿಕಾರಕ್ಕೆ ಸಂದಾಯವಾಗಿರುವ ಕುರಿತಂತೆ ಪ್ರಾಧಿಕಾರದ ಆರ್ಥಿಕ ವಿಭಾಗದವರು ಉಲ್ಲೇಖ [5] ರಲ್ಲಿ ದೃಢೀಕರಿಸಿರುತ್ತಾರೆ



Housiey.com

ಮೇಲ್ಕಂಡ ಅಂಶಗಳಂತೆ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕಸವನಹಳ್ಳಿ ಗ್ರಾಮದ ಸರ್ವೆ ನಂ. 6/7 ರ ಪೈಕಿ 0.05.74 ಗುಂಟೆ ಅಥವಾ 580.72 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Subsection [3] ರಂತೆ ಕೈಗಾರಿಕೆ [ಹೈಟೆಕ್] ವಲಯದಿಂದ ವಸತಿ ಉಪಯೋಗಕ್ಕೆ ಈ ಕೆಳಕಂಡ ನಿಭಂದನೆಗಳಿಗೊಳಪಡಿಸಿ ಭೂ ಉಪಯೋಗ ಬದಲಾವಣೆಗೆ ಸಂಬಂದಿಸಿದಂತೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

1. ಬಡಾವಣೆ / ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ವಲಯ ನಿಯಮಾವಳಿ ಅನುಸಾರ ಮಂಜೂರು ಮಾಡಿಸಿಕೊಳ್ಳುವುದು.
2. ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ / ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು.
3. ಅವಶ್ಯವಿದ್ದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು. ಹಾಗೂ ಮಳೆ ನೀರು ಕೊಯ್ಲು" ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
4. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

[ಕರಡು ಪತ್ರ ಆಯುಕ್ತರವರಿಂದ
ಅನುಮೋದಿಸಲ್ಪಟ್ಟಿದೆ]

19/11/11

ಆಯುಕ್ತರ ಪರವಾಗಿ,
ಬೆಂಅಪ್ರಾ, ಬೆಂಗಳೂರು.

ಇವರಿಗೆ

ಶ್ರೀ ರಾಮಲಿಂಗಾರೆಡ್ಡಿ, ಶ್ರೀಮತಿ ಚಾಮುಂಡೇಶ್ವರಿ
ಮತ್ತು ಶ್ರೀ ಬಿ. ಗೋಪಾಲ ರೆಡ್ಡಿ ಪಾಲುದಾರರು
ರವರುಗಳ ಪರವಾಗಿ
ಮೆ ಎಸ್.ಎಸ್. ಡೆವಲಪರ್ಸ್
# 298/1ಎ, ಮಾಯಾಸಂದ್ರ ಗ್ರಾಮ ಮತ್ತು ಪೋಸ್ಟ್,
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು,
ಬೆಂಗಳೂರು 562 107.

Housiey.com